ನಟಿಸಿದ್ದಾರೆ. ಬರೀ ಹುಚ್ಚಾಟದ ಅಭಿವ್ಯಕ್ತಿ ಏಕಮೇವ ಉದ್ದೇಶವಾಗಿರುವುದರ ಫಲವಿದು. ಹೀಗೆ ಮಾಡುವುದು ಕೂಡ ಸುಲಭವಲ್ಲ. ಪ್ರತಿಭೆ ಬೇಕು. ಜತೆಗೆ ಅವರ ಪಾತ್ರದ ರೂಹೂ ಅದಕ್ಕೆ ಲಗತ್ತೆನ್ನುವಂತೆ ಇರುವುದರಿಂದ ತಾನೇ ತಾನಾಗಿ ಅದಕ್ಕೆ ಔಚಿತ್ಯ ಪ್ರಾಪ್ತಿಯಾಗುತ್ತದೆ. ಜನರಿಗೆ ಇದು ಸಹಜಾಭಿನಯ ಎನ್ನಿಸಲೂ ಇದೇ ಕಾರಣವಿರಬಹುದು.

ಬೆಂಗಳೂರಿನಂಥ ನಗರದಲ್ಲಿ ಒಬ್ಬ ಕಾರ್ಪೊರೇಟರ್ ಮಾಡಬಹುದಾದ ಹಳವಂಡಗಳನ್ನು ಈ ಚಿತ್ರದಲ್ಲಿ ರಂಜನೆಯ ಚೌಕಟ್ಟಿಗೆ ತಂದು ತೋರಿಸಿದ್ದಾರೆ. ಎಲ್ಲೆಂದರಲ್ಲಿ 'ನೋ ಪಾರ್ಕಿಂಗ್' ಬೋರ್ಡ್ ಇಟ್ಟು, ಅಮಾಯಕರಿಂದ ಹಣ ಪೀಕುವ ಸನ್ನಿವೇಶ, ಎದುರಾಳಿಯನ್ನು ಸುಖಾಸುಮ್ಮನೆ ಹಗರಣದಲ್ಲಿ ಸಿಲುಕಿಸಲು ಅಗ್ಗದ ಯೋಚನೆ ಮಾಡುವ ದೃಶ್ಯಗಳು ಇದಕ್ಕೆ ಕೆಲವು ಉದಾಹರಣೆಗಳಷ್ಟೆ.

ಚಿತ್ರಕಥೆ ರೂಪಿಸಿರುವುದರಲ್ಲಿ ಶ್ರದ್ಧೆ ಇದೆ. ಸಂಭಾಷಣೆಯಲ್ಲೂ ಸ್ಥಿರತೆ ಇದೆ. ಈ ವಿನಮ್ರ ('ಹಂಬಲ್' ಎನ್ನುವುದರ ಶಬ್ದಶಃ ಅನುವಾದ ಇದಾದರೂ ಈ ಚಿತ್ರದಲ್ಲಿ ಅದನ್ನೂ ಮೀರಿದ ಧ್ವನ್ಯರ್ಥವಿದೆ; ನಕಾರಾತ್ಮಕವಾದ ಅರ್ಥವದು) ರಾಜಕಾರಣಿ ಭಾಷಣ ಪ್ರಾರಂಭಿಸುವುದು 'ತಮ್ಮೆಲ್ಲರಿಗೆ' ಎಂದೇ ಹೇಳುವುದರ ಮೂಲಕ. ಅದರಲ್ಲೂ ಈ ಪದದಲ್ಲಿ 'ಗೆ' ಎನ್ನುವ ಅಕ್ಷರವನ್ನು ಒತ್ತಿಹೇಳುವ ವಿಲಕ್ಷಣ ಕ್ರಮವಿದೆ. ಕನ್ನಡದ ಬೇರಿನವರಲ್ಲದ ದಾನಿಷ್ ಅದನ್ನು ಲೇವಡಿಯ ಮಟ್ಟಕ್ಕೆ ಇಳಿಸಿಕೊಂಡಿರುವುದರ ಕುರುಹು ಇದು.

ನಗರ ಸಂವೇದನೆಯ ಬಗೆ ಬಗೆಯ ಮಾತಿನ ಸೂಕ್ಷ್ಮಗಳನ್ನು ನಿರ್ದೇಶಕ ಯೋಗರಾಜ್ ಭಟ್ ಹಾಗೂ ಸೂರಿ ಈಗಾಗಲೇ ತೆರೆಮೇಲೆ ಕಾಣಿಸಿದ್ದಾರೆ. 'ಪಂಚರಂಗಿ' ಚಿತ್ರದ ಎಲ್ಲಕ್ಕೂ 'ಗಳು' ಎನ್ನುವುದನ್ನು ಸೇರಿಸಿ ನಾಯಕ ಮಾತನಾಡಿದ್ದ ಬಗೆಯಿತ್ತಲ್ಲ; ಅದಕ್ಕೆ ಕಾವ್ಯದ ಗುಣವಿತ್ತು. ಬೆಂಗಳೂರಿನ ರಕ್ತಸಿಕ್ತ ಕ್ರೌರ್ಯವನ್ನು ಪಯಣ ಪ್ರೀತಿಯ ಮುಖೇನ ಸೂರಿ ದಾಟಿಸಿದ್ದು ಇನ್ನೊಂದು ಬಗೆ. ಆದರೆ, ದಾನಿಷ್ ಹಾಗೂ ಅವರ ಸ್ನೇಹಿತ ನಿರ್ದೇಶಕ ಸಾದ್ ಖಾನ್ ಅವರಿಗೆ ಇಂಥ ಸೂಕ್ಷ್ಮದ ಹಂಗಿಲ್ಲ. ಈ ನೆಲದವರಲ್ಲದವರು ಇಲ್ಲಿನವರನ್ನು ಗೇಲಿ ಮಾಡುವ ಪರಿಯಾಗಿ ಇದನ್ನು ಗಮನಿಸಬೇಕು.

ಈ ದೃಷ್ಟಿಯಿಂದ 'ಹಂಬಲ್ ಪೊಲಿಟಿಷಿಯನ್ ನೊಗ್‌ರಾಜ್' (ನೊಗರಾಜ್ ಅಲ್ಲ, ನೊಗ್‌ರಾಜ್ ಎನ್ನುವುದರಲ್ಲೂ ಕನ್ನಡೇತರ ಧಾಟಿಯೊಂದು ಅಡಗಿದೆ) ತುಂಬಾ ಮುಖ್ಯವಾದ ಸಿನಿಮಾ. ಇದು ಕನ್ನಡದಲ್ಲಿಯೇ ಹೊಸಬಗೆಯದ್ದು.

ಮನರಂಜನಾ ಲೋಕಕ್ಕೆ ಮೌಖಿಕ ಪರಂಪರೆ ಅಥವಾ ವಾಚಾಳಿ ಪರಂಪರೆ ಹೊಸತೇನೂ ಅಲ್ಲ. ಹರಿಕಥೆಯ ಲಯ, ಮಾಸ್ಟರ್ ಹಿರಣ್ಣಯ್ಯನವರ ಪೋನಾವತಾರ, ಲಂಚಾವತಾರ ಕಂಡುಕೇಳಿದ ನಮಗೆ ರೇಡಿಯೊ ಜಾಕಿಗಳ ಮಿಸಳಭಾಜಿ ಕನ್ನಡ ನಿತ್ಯ ಕಿವಿಮೇಲೆ ಬೀಳತೊಡಗಿತು. ಕಚೇರಿ ಕೆಲಸಕ್ಕೆ ಹೋಗುವ, ಬರುವ ಮಾರ್ಗದಲ್ಲಿ ತಾನೇ ತಾನಾಗಿ ಕೇಳುತ್ತಿದ್ದ ರಂಜನೆ ಇದು (ಆಟೊ, ಟ್ಯಾಕ್ಸಿ, ಪಕ್ಕದಲ್ಲಿ ನಿಂತ ಕಾರಿನ ಸ್ಟೀರಿಯೊ, ಬಿಎಂಟಿಸಿ ಬಸ್ಸು ಎಲ್ಲ ಕಡೆಯೂ ರೇಡಿಯೊ ಜಾಕಿಗಳ ಕಂಠಗಳೇ ಅಲ್ಲವೇ ಮೆರೆದಿರುವುದು?) ಇದೇ ಈಗ ಸಿನಿಮಾ ಆಗಿ ರೂಪುತಳೆದಿರುವುದು ಹೊಸ ಸಾಧ್ಯತೆಯೊಂದು ಸಾಕಾರವಾದಂತಾಗಿದೆ.

ದಾನಿಷ್ ಕಾಲೇಜೊಂದರಲ್ಲಿ ತಮ್ಮ ಜೀವನಾನುಭವ ಹಂಚಿಕೊಳ್ಳುತ್ತಾ ಒಮ್ಮೆ ಹೀಗೆ ಹೇಳಿದ್ದರು: 'ನಾನು ಚಿಕ್ಕ ವಯಸ್ಸಿನಿಂದಲೂ ಕಾಲೆಳೆಯುವ ಕೆಲಸ ಮಾಡುತ್ತಿದ್ದೆ. ಮಿಮಿಕ್ರಿ ಮಾಡುತ್ತಿದ್ದೆ. ನಗಿಸುತ್ತಿದ್ದೆ. ತುಂಟತನ ನನ್ನ ಜಾಯಮಾನ. ಆಗ ತರಲೆ ಮಾಡಿದ್ದು ಸಾಕು; ಓದಿಕೋ ಎಂದು ದೊಡ್ಡವರು ಪಾಠ ಹೇಳುತ್ತಿದ್ದರು. ಈಗ ತರಲೆ ಮಾಡು, ಅದಕ್ಕೆ ಹಣವನ್ನೂ